

ನಕ್ಕುಬಿಡಿ



### ಕಾಳಜಿ?

ಮಗ: ಅಪ್ಪಾ, ಶರಾಬು ಕುಡಿಯಬೇಡಿ.

ಅಪ್ಪ: ಕುಡಿಯೋಕೆ ಬಿಡು ಮಗನೇ, ಇಹಲೋಕ ಬಿಟ್ಟು ಹೋಗುವಾಗ ಏನಾದ್ರೂ ಕೊಂಡೊಯ್ಯೋಕ್ಕಾಗುತ್ತಾ?

ಮಗ: ಅಪ್ಪಾ ಇದೇ ರೀತಿ ಕುಡಿಯುತ್ತಾ ಇದ್ರೆ ಹಾಗೆ ಹೋಗುವಾಗ ಬಿಟ್ಟು ಹೋಗೋದಕ್ಕೂ ಏನೂ ಉಳಿಯೋದಿಲ್ಲ!

★★★

### ತರಬೇತಿ

ಮಗ: ಅಪ್ಪಾ, ನಾನು ಮದುವೆಯಾಗಲಿಚ್ಛಿಸುತ್ತೇನೆ.

ಅಪ್ಪ: ತಪ್ಪಾಯಿತೆಂದು ಹೇಳು.

ಮಗ: ನನ್ನದೇನು ತಪ್ಪಾಗಿದೆ?

ಅಪ್ಪ: ಮೊದಲು ತಪ್ಪಾಯಿತೆಂದು ಹೇಳು.

ಮಗ: ಆದರೆ, ನನ್ನ ತಪ್ಪೇನಪ್ಪಾ?

ಅಪ್ಪ: ನೀನೊಮ್ಮೆ ತಪ್ಪಾಯಿತೆಂದು ತಿಳಿಸು.

ಮಗ: ಏಕೆಂದು ಕಾರಣವಾದರೂ ಹೇಳಿ ಅಪ್ಪ...

ಅಪ್ಪ: ಮೊದಲು ತಪ್ಪಾಯಿತೆಂದು ಹೇಳು ಮಗನೇ...

ಮಗ: ಸರಿ. ನನ್ನದು ತಪ್ಪಾಯಿತು ...

ಅಪ್ಪ: ಈಗ ನೀನು ತಯಾರಾಗಿರುವೆ ಮತ್ತು ನಿನ್ನ ತರಬೇತಿ ಪೂರ್ತಿಯಾಯಿತು. ವಿನಾಕಾರಣ 'ಸಾರಿ' ಹೇಳಲು ಕಲಿತ ನಂತರ ಗಂಡಸರು ಮದುವೆಯಾಗಲು ಸಾಧ್ಯ!

★★★

### ತಯಾರಿ!

ಹೈಸ್ಕೂಲ್ ವಿದ್ಯಾರ್ಥಿನಿ 1: ಈ ಬಾರಿಯ ಪರೀಕ್ಷೆಯಲ್ಲಿ ಫೇಲ್ ಆದರೆ ನನ್ನ ಮದುವೆ ಮಾಡಿಸಿ ಬಿಡುವುದಾಗಿ ಅಪ್ಪ ಹೆದರಿಸುತ್ತಿದ್ದಾರೆ ಕಣೆ.

ಹೈಸ್ಕೂಲ್ ವಿದ್ಯಾರ್ಥಿನಿ 2: ಹೌದೆ, ಹಾಗಿದ್ದರೆ ನೀನೆಷ್ಟು ತಯಾರಾಗಿರುವೆ?

ಹೈಸ್ಕೂಲ್ ವಿದ್ಯಾರ್ಥಿನಿ 1: ಈ ಬಾರಿ ಚೆನ್ನಾಗಿ ತಯಾರಿ ಮಾಡಿಕೊಂಡಿದ್ದೇನೆ ಕಣೆ. ಕೇವಲ ಫೇಶಿಯಲ್ ಮಾಡಿಸಿ ಕೊಳ್ಳುವುದೊಂದೇ ಬಾಕಿ?

★★★

### ಖಾರ ಪ್ರೀತಿ!

ಪತ್ನಿ: ಏನ್ರೀ, ನೀವೂ ಇದ್ದೀರಾ... ಪಕ್ಕದ್ಮನೆಯಾತನನ್ನು ನೋಡಿ ಕಲಿತುಕೊಳ್ಳಿ. ಆತ ತನ್ನ ಹೆಂಡತಿಯನ್ನು ಹೂವುಗಳ ರಾಶಿಯಲ್ಲಿ ಮುಳುಗಿಸುವಷ್ಟು ಪ್ರೀತಿಸುತ್ತಾನೆ.

ಪತಿ: ಸರಿ, ನಾನೂ ಹಾಗೇ ಮಾಡ್ತೀನಿ ಕಣೆ. ಆತನದು ಹೂವಿನ ವ್ಯಾಪಾರ. ನನ್ನದು ಮೆಣಸಿನ ಪುಡಿ ವ್ಯಾಪಾರ....!

★★★

### ಗಾಸಿಪ್!

ಪ್ರತಿ ದಿನ ಪಾರ್ಕ್‌ನಲ್ಲಿ ಕೂತು ನಕ್ಕು, ಗಾಸಿಪ್ ಮಾಡುತ್ತಿದ್ದ ಆ ಸ್ತ್ರೀಯರು ಅಂದು ಮೌನವಾಗಿರುವುದನ್ನು ಗಮನಿಸಿ ಗೋಪಿ ವಿಚಾರಿಸಿದ. 'ಇಂದೇಕೆ ಇಷ್ಟೊಂದು ಸುಮ್ಮನಿದ್ದೀರಿ?'

ಒಬ್ಬಾಕೆ ನಿಧಾನವಾಗಿ ಉತ್ತರಿಸಿದಳು. 'ಇಂದು ಎಲ್ಲಾ ಮಹಿಳೆಯರು ಹಾಜರಾಗಿದ್ದಾರೆ!'

(ಸಂಗ್ರಹ):**ರಮೇಶ್ ಶೆಟ್ಟಿ ರೆಂಜಾಳ್, ಮುಂಬೈ**


